**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 15.08.2021.**

**1] ಗಾಂಧಿಚೌಕ ಪೊಲೀಸ ಠಾಣೆ ಗುನ್ನೆ ನಂ: 170/2021 ಕಲಂ: 8 (ಸಿ) & 20 (ಬಿ) ಎನ್.ಡಿ ಪಿ.ಎಸ್ ಆ್ಯಕ್ಟ–1985**

ದಿನಾಂಕ: 14.08.2021 ರಂದು 12.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಯಾಸೀನ @ ಸೈಯ್ಯದ್ ಯಾಶೀನ್ ತಂದೆ ಚಾಂದಬಾಶ್ಯಾ ಆಲಮೇಲ ಸಾ॥ ಸಕಾಫ್‌ರೋಜಾ ಹಮೀದ್ ನಗರ, ವಿಜಯಪುರ. ಈತನು ವಿಜಯಪುರ ಶಹರದ ನವಭಾಗ ರಸ್ತೆಯಲ್ಲಿರುವ ಆಟೋ ಸ್ಟ್ಯಾಂಡ್‌ನಲ್ಲಿ ಯಾಸೀನ ಆಲಮೇಲ ಸಾ॥ ವಿಜಯಪುರ ಎಂಬುವನು ಆಟೋ ನಂಬರ ಕೆಎ:28 ಡಿ:2709 ನೇದ್ದರಲ್ಲಿ ಕುಳಿತು ಕ್ಯಾರಿ ಬ್ಯಾಗಿನಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ. ಈ ಬಗ್ಗೆ ಸ:ತ: ಶರಣಗೌಡ ಬಿ ಗೌಡರ ಪಿಎಸ್‌ಐ (ಕಾ&ಸು) ಗಾಂಧಿಚೌಕ ಪೊಲೀಸ್ ಠಾಣೆ, ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.08.2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 139/2021 ಕಲಂ: 87 ಕೆಪಿ ಆ್ಯಕ್ಟ್**

ದಿನಾಂಕ 13.08.2021 ರಂದು 18:30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ರಾಮನಗೌಡ ಗುಂಡಪ್ಪ ಕೊಟಗಿ 2) ಶಿವು ಬಸಲಿಂಗಪ್ಪಹೂಗಾರ 3) ಪರಸಪ್ಪ ಯಮನಪ್ಪ ಸಾತಿಹಾಳ 4) ಸಾಹೇಬಗೌಡ ನಿಂಗನಗೌಡ ಕರಬಂಟನಾಳ 5) ಬಸವರಾಜ ರೇವಣೆಪ್ಪ ಹೂಗಾರ 6) ರವಿ ಬಸಣ್ಣ ನಾಯ್ಕೋಡಿ 7) ಶಿವಪ್ಪ ಬಸಪ್ಪ ಕಮತಗಿ 8) ರಜಾಕ್ ನಬಿಸಾ ಮುಲ್ತಾನ 9) ಶಾಹೀದ್ ಉಸ್ಮಾನ್ ಅವಟಿ ಎಲ್ಲರೂ ಸಾ॥ ಕೊಣ್ಣೂರ ತಾ॥ ತಾಳಿಕೋಟಿ ಇವರು ತಮ್ಮ ತಮ್ಮ ಪಾಯ್ದೆಗೋಸ್ಕರ ಕೊಣ್ಣೂರ ಗ್ರಾಮದ ಪರಸಪ್ಪ ತಂ ಯಮನಪ್ಪ ಸಾತಿಹಾಳ ಇವರ ಜಮೀನು ಹತ್ತಿರ ಸಾರ್ವಜನಿಕ ಸ್ಥಳದ ಕಟ್ಟೆಯ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಹಣ ಹಚ್ಚಿ ಇಸ್ಪೀಟ ಎಲೆಗಳ ಸಹಾಯದಿಂದ ಅಂದರ ಬಾಹರ ಅಂಬುವ ಇಸ್ಪಿಟ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ವಿನೋದ ದೊಡಮನಿ ಪಿಎಸ್‌ಐ ತಾಳಿಕೋಟಿ ಪೊಲಿಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.08,2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ ನಂ: 151/2021 ಕಲಂ: 78(3) ಕೆಪಿ ಆ್ಯಕ್ಟ್**

ದಿನಾಂಕ 14.08.2021 ರಂದು 1000 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ **1]** ಶೆಟ್ಟೆಪ್ಪ ಶ್ರೀಮಂತ ಕಾಂಬಳೆ 2] ಸುಭಾಸ ಗಂಗಪ್ಪ ಕಾಂಬಳೆ ಸಾ: ಇಬ್ಬರು ಮಾವಿನಹಳ್ಳಿ ಇವರು ತಮ್ಮ ಫಾಯ್ದೆಗೋಸ್ಕರ ಸಾರ್ವನಿಕರ ಕಡೆಯಿಂದ 1 ರೂಪಾಯಿಗೆ 80 ರೂ ಕೊಡುವ ಕರಾರಿನ ಮೇಲೆ ಕಲ್ಯಾಣಿ ಓಸಿ ಮಟಕಾ ಜೂಜಾಟವನ್ನು ಮಾವಿನಹಳ್ಳಿ ಗ್ರಾಮದ ಹುನುಮಾನ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ನಿಂತುಕೊಂಡು ಓಸಿ ಮಟಕಾ ಜೂಜಾಟ ಬರೆದುಕೊಳ್ಳುತ್ತಿದ್ದಾಗ 1270 ರೂಗಳು ಓಸಿ ಅಂಕಿ ಸಂಖ್ಯೆ ಬರೆದ ಚೀಟಿ ಒಂದು ಪೆನ್ನು ಒಂದು ಸಮೇತ ಸಿಕ್ಕಿದ್ದು. ಈ ಬಗ್ಗೆ ಸ:ತ: ಐ ಎಂ ದುಂಡಸಿ ಪಿ.ಎಸ್.ಐ ಇಂಡಿ ಗ್ರಾಮೀಣ ಪೊಲೀಸ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.08.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.